ಹೆಚ್ಚಾಗಿತ್ತು. ಆದರೆ ಕಾಣದೆ ಬೇರೆ ದಾರಿಯಿರಲಿಲ್ಲ. ನನ್ನನ್ನು ಕಂಡದ್ದೇ ಉಮ್ಮ ನನ್ನನ್ನು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತ, "ಹೋಗು ನೋಡು, ನಿನ್ನ ಬಾಪುಟ್ಟಿಯನ್ನ, ಹೇಗಿದ್ದಾನೆ ನೋಡು," ಎಂದು ಕಣ್ಣೀರೊರೆಸಿಕೊಳ್ಳುತ್ತ ಹೊರಗೆ ಹೋಗಿದ್ದಳು. ನಾನು ನಡುಗುವ ಕಾಲುಗಳಿಂದ ಒಳಗೆ ಹೋದರೆ ಬಾಪುಟ್ಟಿ ಚಾಪೆಯ ಮೇಲೆ ಮಲಗಿದ್ದ. ನನ್ನ ನೋಡಿ ಕೂರಲು ಹವಣಿಸಿದ. ಅವನ ಎರಡೂ ಕೈಗಳಿಗೆ ಬ್ಯಾಂಡೇಜು ಸುತ್ತಲಾಗಿತ್ತು, ಅವೆರಡೂ ತುಂಡಾಗಿದ್ದವು. ಮೊಣಕೈವರೆಗೆ ಮಾತ್ರವೇ ಇತ್ತು. ಅದಕ್ಕೆ ಬ್ಯಾಂಡೇಜು ಸುತ್ತಿ, ದೇವರೇ... ನಾನು ಅಳುತ್ತ ಲೇಖನ ಬರೆದ ನನ್ನ ಪಾಪಗ್ರಸ್ತ ಕೈಗಳಿಂದ ಅವನನ್ನು ಆಸರೆ ಹಿಡಿದು ಸರಿಯಾಗಿ ಕೂರಿಸಿದ್ದೆ. “ಆದರೂ ಬಾಪುಟ್ಟಿ, ನೀನು ಬರೆದಿಲ್ಲ ತಾನೇ ಅದು ಮತ್ಯಾಕೆ ಹೀಗೆ ಮಾಡಿದೆ.” ನನ್ನ ಕಂಗಳು ನೀರಾಡಿದ್ದವು. “ಅದೊಂದು ಕಥೆ. ನಮ್ಮ ಪ್ರಭ ಇಲ್ಲವಾ, ಅವಳು ಅವೊತ್ತು ತೋಟಕ್ಕೆ ಬಂದು ಒಂದೇ ಅಳು. ಊರಿನಲ್ಲಿ ಗುಲ್ಲಾಗಿದೆ. ಪೇಪರಿಗೆ ಪೊಲೀಸಿಗೆ ಸುದ್ದಿ ಕೊಟ್ಟಿದ್ದು ಉಣ್ಣಿಯೇ ಅಂತ. ಎಷ್ಟೋ ವರ್ಷಗಳಿಂದ ನಡೀತಿರೋ ದಂಧೆ ಇಷ್ಟು ದಿನ ಇಲ್ಲದ ವಿಷಯ ಇವಾಗ್ಯಾಕೆ ಸುದ್ದಿ ಆಯ್ತು ಅಂತ ಅವರ ಪ್ರಶ್ನೆ. ಊರಿಗೆ ಹೊಸಬ ಅಂದರೆ ಉಣ್ಣಿ, ಅದೂ ಅಲ್ಲದೆ ಅವನಿಗೆ ಮಾಡುಬೆಟ್ಟ ಗೊತ್ತು. ಅವನೇ ಎಷ್ಟೋ ಸಲ, ಕೆಲಸ ಕೆಲಸ ಅಂತ ಯಾರ್ಯಾರ ಜೊತೆಗೋ ಅಲ್ಲಿ ಹೋಗಿಯೂ ಇದ್ದನಂತೆ. ಅದೂ ಸಾಲದಕ್ಕೆ ಸ್ವಲ್ಪ ದಿನಕೆ ಮುಂಚೆ ಉಣ್ಣಿಗೆ ಯಾರೋ ಒಬ್ಬ ಮೊದಲಾಳಿ ಜೊತೆ ಸಣ್ಣಗೆ ಮಾತಾಗಿತ್ತಂತೆ. ಇಲ್ಲಿ ಬಂದು ನೆಲ ಗುತ್ತಿಗೆ ಹಿಡಿತೀನಂದ್ರೆ ಜೀತಕ್ಕಿದೀನಿ ಅಂದುಕೊಳ್ಳೋದು ಬೇಡ. ನಾನು ಹಣಕೊಟ್ಟು ಗುತ್ತಿಗೆ ತೆಗೀತಾ ಇರೋದು. ನಮ್ಮೂರಲ್ಲಿ ನಾನು ನಿಮಗಿಂತ ಸಾಹುಕಾರ ಅಂದನಂತೆ ಉಣ್ಣಿ. ಇದೆಲ್ಲ ಪ್ರಭ ಹೇಳಿದ್ದು. ಎಷ್ಟು ನಿಜವೋ ಎಂತೋ, ಅಂತೂ ಅವರು ಉಣ್ಣಿಗೆ ಹುಡುಕುತ್ತಿದ್ದದು ನಿಜ, ಅದಕ್ಕಿಂತ ದೊಡ್ಡ ನಿಜ, ಉಣ್ಣಿಯನ್ನು ಪ್ರಭ ಜೀವದಂತೆ ಪ್ರೀತಿಸ್ತಾ ಇದ್ದಳು ಅನ್ನೋದು. ನಾನು ಪ್ರೀತಿಸಿದ ಹುಡುಗಿ ಅಲ್ವಾ ನಮ್ಮ ಪ್ರಭಾ? ನನ್ನತ್ರ ಏನಿದೆ? ಇದೊಂದು ಲಡಾಸಿ ಬೈಕು, ಎರಡು ಮೀನಿನ ತೊಟ್ಟಿ. ಇಷ್ಟು ಬಿಟ್ಟರೆ ಎಂತ ಇದೆ? ಉಣ್ಣಿಯನ್ನು ಮದುವೆಯಾದರೆ ಸುಖವಾಗಿರ್ತಾಳೆ. ಇನ್ನು ಉಣ್ಣಿ ಮಾಡಿದ ಕೆಲಸಕ್ಕೆ ಅವನನ್ನ ಬಿಡುವುದುಂಟಾ? ಸಿಕ್ಕಿದರೆ ಕೊಂದೇ ಕೊಲ್ತಾರೆ. ಅದಕ್ಕೆ ನಾನೇ ಹೋದೆ. ಆಗುವುದಾಗಲಿ, ನಾನು ಹೋದರೆ ಯಾರಿಗೇನೂ ಅಂಥ ದೊಡ್ಡ ನಷ್ಟವಿಲ್ಲ ಅನಿಸಿ ಹೋದೆ. ಅವರು ಕೈ ಮೇಲೆ ಜೀಪು ಹರಿಸಿದರು, ಈಗ ಎರಡು ಕೈ ಹೋಯ್ತು. ಅಷ್ಟೇ.” ಬಾಪುಟ್ಟಿ ತುಂಬ ಸಣ್ಣ ದನಿಯಲ್ಲಿ, ಹೆಚ್ಚು ಏರಿಳಿತವಿಲ್ಲದೆ, ಯಾರದೋ ಕಥೆಯನ್ನು ಹೇಳುತ್ತಿರುವಂತೆ ನಿರ್ವಿಕಾರವಾಗಿ ಹೇಳಿದ. “ಎಂಥ ಅಷ್ಟೇ, ಆ ಉಣ್ಣಿಗಾಗಿ, ಆ ಹಾಳಾದ ಪ್ರಭಳಿಗಾಗಿ ಇಷ್ಟೆಲ್ಲ ಮಾಡುವುದುಂಟಾ? ಎಲ್ಲಾದರೂ ಉಂಟಾ? ಹಾಗಾದರೆ ಹೆತ್ತ ಅಮ್ಮ ನಾನೇಕೆ ಬೇಕು ಇವನಿಗೆ? ಆದರೆ ದೇವರಿದ್ದಾನೆ. ಇವತ್ತು ನೋಡು ನನ್ನ ಮಗ ಹೀಗೆ ಮಲಗಿದ್ದರೆ ಒಂದು ಮಾತು ಕೇಳಲು ಬಂದಳಾ ಬೋಸುಡಿ? ಅಪ್ಪ ಮಗಳು ಆ ನಾಯಿಂಡ ಮೋನ್ ಉಣ್ಣಿ ಎಲ್ಲ ಊರು ಬಿಟ್ಟು ರಾತ್ರೋ ರಾತ್ರಿ ಪರಾರಿಯಾಗಿದ್ದಾರೆ. ಆದರೆ ದೇವರಿದ್ದಾನೆ. ಅವರು ಊರು ದಾಟಿರುವುದು ನಿಜಾ ಡೌಟೇ! ಎಂಥಾ ಮಳೆಯಿತ್ತು ಆಗ. ನಮ್ಮ ಮಾಡುಹೊಳೆ ನೆರೆ ಬಂದಿತ್ತು. ನೆರೆ ಅಂದರೆ ಹಾಗೆ ನೆರೆ ಅಲ್ಲ ಅಂದ್ರೂ ಸೇತುವೆ ಮುಳುಗಿತ್ತು. ಅದರ ಮೇಲೆ ಹೋಗಿದ್ದಾರೆ. ಖಂಡಿತ ಕೊಚ್ಚಿ ಹೋಗಿರಬೇಕು. ಒಂದು ಸದ್ದು, ಸುದ್ದಿ ಇಲ್ಲ.” ಆಮೇಲೆ ಉಮ್ಮ ಜೋರು ದನಿಯಲ್ಲಿ ಬಾಯಿ ಮಾಡುತ್ತ ಮಾತು ತೊಡಗಿದ್ದರೂ ಕಡೆಯ ಸಾಲಿಗೆ ಬರುವಾಗ ದನಿ ತಗ್ಗಿಸಿದ್ದರು. ಅವರು ಅದು ಹೇಗೇ ತಗ್ಗಿಸಲಿ. ಬರೆದವನು ನಾನಿನ್ನೂ ನನ್ನ ಕೈಗಳೊಂದಿಗೆ, ಪ್ರಾಣದೊಂದಿಗೆ ಇಲ್ಲಿ ಇಷ್ಟು ಪುಷ್ಟಿಯಿಂದ ಕುಳಿತಿರುವಾಗ ಭಗವಂತ, ನಿನ್ನ ನ್ಯಾಯದ ಲೆಕ್ಕ ನಿಜವಾಗಿ ಹೇಗೆ? ನನಗೆ ಕಣ್ಣು ತುಂಬಿ ತುಂಬಿ ಅಳು ಬಂತು. ನಾನು ಏನೂ ಮಾತಾಡಲಿಲ್ಲ. ಬಾಪುಟ್ಟಿಯಲ್ಲಿ